ವಿಷಯ :- ವಿಜಾಪುರ ನಗರ ಮಾಸ್ಟರ್ ಪ್ಲಾನ್ ಕುರಿತು.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2322 (3023)

ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ನಗರವನ್ನು ಮಾಸ್ಟರ್ ಪ್ಲಾನ್ ಅಡಿಯಲ್ಲಿ ಅಳವಡಿಸುವ ವಿಷಯ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :-

ಅ) ವಿಜಾಪುರ ನಗರಕ್ಕೆ ವ್ಯಾಪಕಾಭಿವೃದ್ಧಿ ಯೋಜನೆಯು (ಮಾಸ್ಟರ್ ಪ್ಲಾನ್) 1992 ರಿಂದ ಚಾಲ್ತಿಯಲ್ಲಿರುತ್ತದೆ. ಅನುಮೋದನೆಯಾದ ವ್ಯಾಪಕಾಭಿವೃದ್ಧಿ ಯೋಜನೆಯನ್ನು ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರವು ಪರಿಪಾಲಿಸುತ್ತಿದೆ.

ವಿಷಯ :- ವಿಜಾಪುರ ನಗರದಲ್ಲಿ ಚರಂಡಿ ವ್ಯವಸ್ಥೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2323 (3022)

ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ನಗರದಲ್ಲಿ ಕಳೆದ 3-4 ವರ್ಷಗಳಿಂದ ನಗರಸಭೆಯಿಂದ ನಿರ್ಮಿಸಲಾಗಿರುವ ಚರಂಡಿ ವ್ಯವಸ್ಥೆ ರಸ್ತೆ ಹಾಗೂ ನಿರ್ಮಾಣ ಕಾರ್ಯ ತೀವ್ರ ಕೆಳಮಟ್ಟದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅನೇಕ ಗುತ್ತಿಗೆದಾರರು ಕಳಪೆಮಟ್ಟದ ಕಾಮಗಾರಿಗಳನ್ನು ಮಾಡಿ ನಗರಸಭೆಯ ಸಾರ್ವಜನಿಕ ವ್ಯವಸ್ಥೆ ಹಾಳಾಗಿರುವ ಸಂಬಂಧದಲ್ಲಿ ಇಂತಹ ಗುತ್ತಿಗೆದಾರರನ್ನು ಕಪ್ಪುಪಟ್ಟಿಯಲ್ಲಿ ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? ಹಾಗಿದ್ದಲ್ಲಿ ಯಾವಾಗ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದಾರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಇಲ್ಲಾ

ಆ) ಉದ್ಭವಿಸುವುದಿಲ್ಲಾ.

ವಿಷಯ :- ಬಿಜಾಪುರ ಜಿಲ್ಲೆಯಲ್ಲಿ ಮಂಜೂರಾದ ಬಾಲವಿಕಾಸ ಯೋಜನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2324 (3024)

ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) :- ಮಾನ್ಯ ಮಹಿಳಾ ಮತ್ತು ಮಕ್ಕಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ಜಿಲ್ಲೆಯಲ್ಲಿ ಸರ್ಕಾರದಿಂದ ಮಂಜೂರಾದ ಒಟ್ಟು ಬಾಲ ವಿಕಾಸ ಯೋಜನೆ ಕೇಂದ್ರಗಳೆಷ್ಟು?

ಆ) ಈ ಕೇಂದ್ರ ನಿರ್ವಹಣೆಗಾಗಿ ಪ್ರಸಕ್ತ ವರ್ಷದಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು;

ಇ) ವಿಜಾಪುರ ಜಿಲ್ಲೆಯಲ್ಲಿ ಈ ಕೇಂದ್ರಗಳು ತೃಪ್ತಿಕರವಾಗಿ ಕೆಲಸ ನಿರ್ವಹಿಸುತ್ತಿವೆಯೇ;

ಈ) ಜಿಲ್ಲೆಯಲ್ಲಿ ಇನ್ನೂ ಹೊಸದಾಗಿ ಮಂಜೂರಾಗಬೇಕಾದ ಕೇಂದ್ರಗಳೆಷ್ಟು ಅವು ಯಾವುವು?

ಶ್ರೀ ಮತಿ ಬಿ. ಟಿ. ಲಲಿತಾ ನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :-

ಅ) ಬಿಜಾಪುರ ಜಿಲ್ಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ವಲಯಗಳಡಿಯಲ್ಲಿ ಒಟ್ಟು 11 ಬಾಲವಿಕಾಸ ಯೋಜನೆಗಳು ಮಂಜೂರಾಗಿದ್ದು ಈ ಯೋಜನೆಗಳಲ್ಲಿ 2667 ಅಂಗನವಾಡಿ ಕೇಂದ್ರಗಳು ಮಂಜೂರಾಗಿವೆ.

ಆ) ಪ್ರಸ್ತಕ ವರ್ಷದಲ್ಲಿ ಸೆಪ್ಟೆಂಬರ್ 95 ರ ಅಂತ್ಯವರೆಗೆ ಸಮಗ್ರ ಬಾಲವಿಕಾಸಯೋಜನೆ ಅಡಿಯಲ್ಲಿ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮಕ್ಕಾಗಿ 138.48 ಲಕ್ಷ ರೂ. ಗಳನ್ನು ಹಾಗೂ ಆಡಳಿತ ವೆಚ್ಚಕ್ಕಾಗಿ 34.32 ಲಕ್ಷ ರೂ.ಗಳನ್ನು ಒಟ್ಟು 172.80 ಲಕ್ಷ ರೂ.ಗಳನ್ನು ಜಿಲ್ಲಾಪಂಚಾಯಿತಿಗೆ ಬಿಡುಗಡೆ ಮಾಡಲಾಗಿದೆ.

ಇ) 1994-95 ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾಗಿರುವ ಬಾಗಲಕೋಟೆ ಹಾಗೂ ಹುನಗುಂದ ತಾಲ್ಲೂಕಿನ 464 ಕೇಂದ್ರಗಳು ಹಾಗೂ 416 ಹೆಚ್ಚುವರಿ ಕೇಂದ್ರಗಳು ಇನ್ನು ಕಾರ್ಯನಿರತವಾಗಬೇಕಿರುತ್ತವೆ. ಉಳಿದಂತೆ ಇತರೆ ಈಗ ನಡೆಯುತ್ತಿರುವ ಯೋಜನೆಗಳ ಕೇಂದ್ರಗಳು ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತಿವೆ.

ಈ) ಬಿಜಾಪುರ ಜಿಲ್ಲೆಯ ಎಲ್ಲಾ 11 ತಾಲ್ಲೂಕುಗಳನ್ನು ಐಸಿಡಿಎಸ್ ಯೋಜನೆಯ ವ್ಯಾಪ್ತಿಗೊಳಪಡಿಸಲಾಗಿದ್ದು, ಈ ಜಿಲ್ಲೆಗೆ ಹೊಸ ಐಸಿಡಿಎಸ್ ಯೋಜನೆಗಳ ಅವಶ್ಯಕತೆ ಇರುವುದಿಲ್ಲ. 1993-94 ನೇ ಸಾಲಿನಲ್ಲಿ ಇಲಾಖೆಯು ಈ ಜಿಲ್ಲೆಯ 5 ಯೋಜನೆಗಳಿಗೆ 233 ಹೆಚ್ಚುವರಿ ಕೇಂದ್ರಗಳನ್ನು ಮಂಜೂರು ಮಾಡುವಂತೆ ಕೇಂದ್ರ ಸರ್ಕಾರವನ್ನು ಕೋರಿದ್ದು, ಕೇಂದ್ರ ಸರ್ಕಾರವು 122 ಹೆಚ್ಚುವರಿ ಕೇಂದ್ರಗಳನ್ನು ಮಂಜೂರು ಮಾಡಿದ್ದು ಉಳಿದ ಹೆಚ್ಚುವರಿ ಕೇಂದ್ರಗಳನ್ನು ಇನ್ನೂ ಮಂಜೂರು ಮಾಡಬೇಕಿರುತ್ತದೆ.

ವಿಷಯ :- ವಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ವಸತಿನಿಲಯಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2325 (2166)

ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?